

ಅಲ್ಲಿ ಬೆಳ್ಮುಗಿಲುಗಳು ಇಂದ್ರಧನುವನು ಮುಡಿದು
ಮೆಲ್ಲಗವಧದ ಕಡೆಗೆ ಸರಿವುದಂತೆ
ಅಲ್ಲಿ ಹರಿಯುವ ಹೊಳೆ ಪಾತ್ರದುದ್ದಕು ಒಂದು
ದಾಂಪತ್ಯಗೀತೆಯನು ಬರೆವುದಂತೆ

ಮಿಥಿಲೆಯಲಿ ಕ್ರೌಂಚಗಳು ಕಾಗೆ ಗುಬ್ಬಿಯ ಹಾಗೆ
ಮನೆಯ ಅಂಗಳದಲ್ಲೆ ಇಳಿವುವಂತೆ
ಮಾನಿಷಾದಾ ಎಂದು ಹೇಳೋಣವೆಂದರೆ
ಬೇಟೆಗಾರರೆ ಅಲ್ಲಿ ಇಲ್ಲವಂತೆ

ರಾಮ ಹುಟ್ಟಿದ ಜಾಗದಲ್ಲಿ ಮಾತ್ರವೆ ಅಲ್ಲ
ಸೀತೆ ಹುಟ್ಟಿದ ಕಡೆಯು ರಾಮಾಯಣ
ದಯಮಾಡಿ ಕಣ್ಣು ಕೊಡಿ ಒಂದು ಕ್ಷಣ ಎರವಲು
ನೋಡುವೆನು ನಾನೂನು ರಾಮಾಯಣ